# ಕರ್ನಾಟಕ ವಿಧಾನ ಪರಿಷತ್

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | (1610)1382 |
| ಸದಸ್ಯರ ಹೆಸರು | : | ಶ್ರೀ. ಐವಾನ್ ಡಿ ಸೋಜಾ (ವಿಧಾನ ಸಭಾ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 19/12/2025 |
| ಉತ್ತರಿಸುವ ಸಚಿವರು | : | ಮಾನ್ಯ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ 6 ವರ್ಷಗಳಿಂದ ಕರಾವಳಿ ಭಾಗದ ಮಂಗಳೂರಿನಲ್ಲಿ ಕೊಂಕಣಿ ಭವನವು ಅನುದಾನ ಕೊರತೆಯಿಂದ ಕಾಮಗಾರಿ ಸಂಪೂರ್ಣಗೊಳ್ಳದೆ ಸರ್ಕಾರದ ಹಣ ಪೋಲು ಆಗುತ್ತಿದ್ದು, ಈ ಬಗ್ಗೆ ಸಚಿವರು ಸದನದಲ್ಲಿ ಅನುದಾನ ಬಿಡುಗಡೆಗೊಳಿಸಿ ಕಾಮಗಾರಿ ಪೂರ್ಣಗೊಳಿಸುವ ಆಶ್ವಾಸನೆ ನೀಡಿದ್ದು, ಅದನ್ನು ನಿರ್ವಹಿಸದೆ ಇರಲು ಕಾರಣವೇನು; (ವಿವರ ನೀಡುವುದು) | ಮಂಗಳೂರಿನಲ್ಲಿ ಕೊಂಕಣಿ ಸಾಹಿತ್ಯ ಅಕಾಡೆಮಿ ಕಟ್ಟಡವನ್ನು ನಿರ್ಮಿಸಲು, ರೂ.500-00ಲಕ್ಷಗಳ ಅಂದಾಜು ವೆಚ್ಚದಲ್ಲಿ ನಿರ್ಮಾಣ ಮಾಡಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಸರ್ಕಾರದ ಆದೇಶ ಸಂಖ್ಯೆ:ಕಸಂವಾ 110 ಕೆಒಎಲ್ ಆಕ 2019, ದಿನಾಂಕ:07.12.2019ರ ಸರ್ಕಾರಿ ಆದೇಶದಲ್ಲಿ ಮಂಜೂರಾತಿ ನೀಡಿದ್ದು, ಇದನ್ನು ಅನುಸರಿಸಿ, ರೂ.300-00ಲಕ್ಷಗಳನ್ನು ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳಿಗೆ ದಿನಾಂಕ:15.03.2021ರಂದು ಗಡಿ ಅಭಿವೃದ್ಧಿ ಪ್ರಾಧಿಕಾರದಿಂದ ಬಿಡುಗಡೆ ಮಾಡಲಾಗಿದೆ.<br><br>ಕನ್ನಡ ಭಾಷೆಗೆ ಪೂರಕವಲ್ಲದ ಕೊಂಕಣಿ ಅಕಾಡೆಮಿಗೆ ಅನುದಾನ ಗಡಿ ಪ್ರಾಧಿಕಾರದಿಂದ ನೀಡಿದ್ದು, ಸಮಂಜಸವಲ್ಲವೆಂದು ಹಾಗೂ ಗಡಿ ಪ್ರಾಧಿಕಾರದ ಅನುಮೋದನೆ ಇಲ್ಲದೇ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವಾಲಯದ ಹಂತದಲ್ಲಿಯೇ ಅನುಮೋದನೆ ನೀಡಿರುವ ಬಗ್ಗೆ ಮಹಾಲೇಖಪಾಲರು ದಿನಾಂಕ:18.09.2020ರಂದು ಆಕ್ಷೇಪಣೆ ಸಲ್ಲಿಸಿರುತ್ತಾರೆ. ಸದರಿ ಆಕ್ಷೇಪಣೆಯನ್ನು ಸರ್ಕಾರವು ಪರಿಶೀಲಿಸಿದೆ.<br><br>2021-22ನೇ ಸಾಲಿನಿಂದ ಪ್ರಾಧಿಕಾರಕ್ಕೆ ಆರ್ಥಿಕ ಇಲಾಖೆ ನಿಗದಿಪಡಿಸಿದ ಅನುದಾನದ ಮಿತಿಯಲ್ಲಿ, ಈಗಾಗಲೇ ಕೊಂಕಣ ಭವನಕ್ಕೆ ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಿರುವ ರೂ.300-00ಲಕ್ಷಗಳ ಅನುದಾನಕ್ಕೆ ಸೀಮಿತಿಗೊಳಿಸಿ ಕಟ್ಟಡ ಪೂರ್ಣಗೊಳಿಸುವಂತೆ ದಿನಾಂಕ:26.03.2021ರಲ್ಲಿ ಗಡಿ ಪ್ರಾಧಿಕಾರದ ಸಾಮಾನ್ಯ ಸಭೆಯಲ್ಲಿ ನಿರ್ಣಯಿಸಲಾಗಿದ್ದು, ಇದಕ್ಕೆ ಕೊಂಕಣಿ ಸಾಹಿತ್ಯ ಅಕಾಡೆಮಿಯ ಒಪ್ಪಿಗೆಯನ್ನು ನೀಡಿದ್ದು, ಕೊಂಕಣಿ ಸಾಹಿತ್ಯ ಅಕಾಡೆಮಿಯ ರೂ.300-00ಲಕ್ಷಗಳ ಸೀಮಿತ ಅಂದಾಜು ವೆಚ್ಚಕ್ಕೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸರ್ಕಾರಿ ಆದೇಶ ಸಂಖ್ಯೆ:ಕಸಂವಾ 47 ಕೆಒಎಲ್ ಆಕ 2021, ದಿನಾಂಕ:02.12.2021ರಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಹಂತದಲ್ಲಿ ಆಡಳಿತಾತ್ಮಕ ಮಂಜೂರಾತಿ ನೀಡಿರುತ್ತದೆ. |

| | | | |
|---|---|---|---|
| | | | ಕೊಂಕಣಿ ಸಾಹಿತ್ಯ ಅಕಾಡೆಮಿ ಕಟ್ಟಡವನ್ನು ದಕ್ಷಿಣ ಕನ್ನಡ, ಮಂಗಳೂರು ತಾಲ್ಲೂಕಿನ ದೇರೆಬೈಲು ಗ್ರಾಮದ ಸರ್ವೆ ನಂ:126/2ಎ, 1ಎ ನಲ್ಲಿ ನಿರ್ಮಾಣ ಮಾಡಲಾಗುತ್ತಿದ್ದು, ಕಟ್ಟಡ ಕಾಮಗಾರಿಯನ್ನು ಲೋಕೋಪಯೋಗಿ ಇಲಾಖೆ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ನಿರ್ಮಾಣ ಮಾಡುತ್ತಾರೆ. ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು ದಿನಾಂಕ:16.07.2024ರಂದು ಕಟ್ಟಡದ ಸ್ಥಳ ಪರಿಶೀಲನೆ ಮಾಡಿದ್ದು, ಶೇ.90ರಷ್ಟು ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. ಇಲ್ಲಿಯವರೆಗೆ ರೂ.269-54ಲಕ್ಷಗಳ ಅನುದಾನವನ್ನು ವೆಚ್ಚ ಮಾಡಿ, ಗಡಿ ಪ್ರಾಧಿಕಾರಕ್ಕೆ ಹಣಬಳಕೆ ಪ್ರಮಾಣ ಪತ್ರ ಸಲ್ಲಿಸಿರುತ್ತಾರೆ. ಬಾಕಿ ಉಳಿದ ರೂ.30-40ಲಕ್ಷಗಳ ಅನುದಾನಕ್ಕೆ ಹಣಬಳಕೆ ಪ್ರಮಾಣ ಪತ್ರ ಸಲ್ಲಿಸುವುದು ಬಾಕಿ ಇರುತ್ತದೆ.<br><br>ಹಣಬಳಕೆ ಪ್ರಮಾಣಪತ್ರ ಸಲ್ಲಿಸಿದ ನಂತರ ಹೆಚ್ಚುವರಿ ಅನುದಾನದ ಅಗತ್ಯತೆ ವಿದ್ದಲ್ಲಿ ಪರಿಶೀಲಿಸಿ ಅಗತ್ಯ ಕ್ರಮವಹಿಸಲಾಗುತ್ತದೆ. |
| ಆ) | ಕೊಂಕಣಿ ಭವನ ಇಲ್ಲದೆ ಸಮಾಜದ ಎಲ್ಲಾ ಕಾರ್ಯಕ್ರಮಗಳಿಗೆ ತೊಂದರೆ ಉಂಟಾಗಿದ್ದು, ಈ ಭವನಕ್ಕೆ ಬೇಕಾದ ಅನುದಾನ ಬಿಡುಗಡೆ ಮಾಡದೆ ಇಡೀ ಸಮಾಜಕ್ಕೆ ಇಲಾಖೆಯು ನಿರ್ಲಕ್ಷತನ ತೋರಿಸಿದೆ ಎಂಬ ಆರೋಪ ಇದ್ದು, ಈ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳುವುದೇ; | | ಗಡಿ ಅಭಿವೃದ್ಧಿ ಪ್ರಾಧಿಕರವೂ 2025-26ನೇ ಸಾಲಿನಿಂದ ಯೋಜನಾ ಇಲಾಖೆ ವ್ಯಾಪ್ತಿಗೆ ಸೇರ್ಪಡೆಗೊಂಡಿರುವುದರಿಂದ ಯಾವುದೆ ನಿರ್ಲಕ್ಷತೆ ತೋರಿಸಿರುವುದಿಲ್ಲ. |
| ಇ) | ಕೊಂಕಣಿ ಭವನದ ಸ್ಥಳಕ್ಕೆ ಭೇಟಿ ನೀಡಿ ಕ್ರಮ ಕೈಗೊಳ್ಳುವುದಾಗಿ ಸದನದಲ್ಲಿ ಭರವಸೆ ನೀಡಿದ ಮಂತ್ರಿಗಳು ಆ ಭಾಗಕ್ಕೆ ತೆರಳದೇ ಇರುವುದಕ್ಕೆ ಕಾರಣಗಳೇನು? (ವಿವರ ನೀಡುವುದು) | | ದಿನಾಂಕ: 16-07-2024ರಂದು ಗಡಿ ಪ್ರಾಧಿಕಾರದ ಅಧ್ಯಕ್ಷರು ಸ್ಥಳಕ್ಕೆ ಬೇಟಿನೀಡಿ ಪರಿಶಿಲಿಸಿರುತ್ತಾರೆ. 2025-26ನೇ ಸಾಲಿನಿಂದ ಯೋಜನಾ ಇಲಾಖೆ ವ್ಯಾಪ್ತಿಗೆ ಸೇರ್ಪಡೆಗೊಂಡಿರುವುದರಿಂದ ಅನುಷ್ಠಾನ ಪ್ರಕ್ರಿಯೆ ಚುರುಕುಗೊಳಿಸಿ ಕಾಮಗಾರಿ ಪೂರ್ಣಗೊಳಿಸಲು ಕ್ರಮವಹಿಸಲಾಗುತ್ತದೆ. |

**(ಡಿ.ಸುಧಾಕರ್)**

ಯೋಜನೆ, ಕಾರ್ಯಕ್ರಮ ಸಂಯೋಜನೆ

ಮತ್ತು ಸಾಂಖ್ಯಿಕ ಇಲಾಖೆ ಸಚಿವರು